ಆಡುವ ಮಾತುಕತೆಗಳು, ಬಾಯಿ ಚಪಲ ತೀರಿಸಿಕೊಳ್ಳುವ ಕ್ರಿಯೆಯಾಗಿಬಿಡುವ ಅಪಾಯವಿದೆ. ಆದರೆ, ಇಡೀ ಮಂತ್ರಿಮಂಡಳದಲ್ಲಿ ಅವರಷ್ಟು ಧೈರ್ಯವಾಗಿ ಮೂಲಭೂತ ಪ್ರಶ್ನೆಗಳನ್ನು ಎತ್ತಬಲ್ಲವರು ಯಾರು ಇದ್ದಾರೆ?

ನಿಮ್ಮವ,
ಯು.ಆರ್. ಅನಂತಮೂರ್ತಿ'

ಪ್ರಕಟವಾಗದೆ ಹೋದ ಈ ಪತ್ರದಲ್ಲಿ ಬಿಬಿಯವರು ಎತ್ತಿದ ಪ್ರಶ್ನೆಗಳು ಗಂಭೀರ ಚರ್ಚೆಗೆ ಒಳಗಾಗಬೇಕೆಂಬ ಉದ್ದೇಶವಿರುವುದು ಸ್ಪಷ್ಟವಾಗಿದೆ. ದಲಿತರು ಬಂಡೇಳುವುದರಿಂದಲೇ ಶ್ರೇಣೀಕೃತ ಸಮಾಜದಲ್ಲಿ ಸಂಚಲನೆ ಉಂಟಾಗುತ್ತದೆ. ಅಸ್ಪೃಶ್ಯರನ್ನು ಒಳಗೊಳ್ಳದೆ ಸವರ್ಣೀಯರ ಜಡತ್ವ ಚಿಗುರುವುದಿಲ್ಲ ಎಂಬ ಅನಂತಮೂರ್ತಿಯವರ ಆಶಯವು 'ಭಾರತೀಪುರ' ಕಾದಂಬರಿಯಲ್ಲಿ ಬೇರೊಂದು ಬಗೆಯಲ್ಲಿ ಮಂಡಿತವಾಗಿತ್ತು. ಇದು ಬೂಸಾ ಪ್ರಕರಣದ ವರ್ಷದಲ್ಲೇ ಪ್ರಕಟವಾಯಿತು ಎನ್ನುವುದು ಗಮನಾರ್ಹ.

ಅನಂತಮೂರ್ತಿಯವರು ಮಡಿಕೇರಿಯ ಸಭೆಯೊಂದರಲ್ಲಿ (ಡಿಸೆಂಬರ್ 1973) ಬೂಸಾ ವಿಷಯವನ್ನು ಮತ್ತೆ ಪ್ರಸ್ತಾಪಿಸಿದರು. 'ಕನ್ನಡ ಸಾಹಿತ್ಯ ಕುರಿತ ಬಸವಲಿಂಗಪ್ಪನವರು ಆಡಿದ ಮಾತು ವಾಸ್ತವವಾಗಿದೆಯೆಂದೂ ಕನ್ನಡ ಸಾಹಿತ್ಯ ಟೀಕಿಸಲು ಅವರಿಗೆ ಎಲ್ಲಾ ಹಕ್ಕುಗಳೂ ಇವೆ'ಯೆಂದೂ ಹೇಳಿದರು. ತಮ್ಮ ವಿರುದ್ಧದ ಟೀಕೆಗಳಿಗೆ ಉತ್ತರಿಸುತ್ತ, 'ಚರಿತ್ರೆಯ ಚಕ್ರದ ಮೇಲಿರುವವರು ಚಕ್ರದ ಕೆಳಗಿರುವವರು ಮೇಲೆ ಬರುವುದನ್ನು ಸಹಿಸುತ್ತಿಲ್ಲವೆಂದೂ, ಚಲನೆ ಸಾಧ್ಯವಾಗದ ಕೆಳಗಿನವರು ಅನಿವಾರ್ಯವಾಗಿ ಉಗ್ರಗಾಮಿಗಳಾಗುತ್ತಿದ್ದಾರೆಂದೂ, ತಾತ್ವಿಕವಾಗಿ ಬಂಡಾಯವನ್ನು ಒಪ್ಪುವವರು ಬಸವಲಿಂಗಪ್ಪನವರಂತಹ ಸೀಮಿತ ರಾಜಕಾರಣಿ ಮಾಡಿದ ಟೀಕೆಯನ್ನು ಕೂಡ ಸಹಿಸಲು ಸಿದ್ಧರಾಗಿಲ್ಲದಿರುವುದು ದುರಂತವೆಂದೂ, ಈವರೆಗೆ ನಡೆದ ಬ್ರಾಹ್ಮಣ–ಶೂದ್ರ ವಿಂಗಡಣೆ ಕೃತಕವೆಂದೂ, ನಿಜವಾದ ಶೂದ್ರರು ಪಂಚಮ'ರೆಂದೂ ಅವರು ತಮ್ಮದೊಂದು ಲೇಖನದಲ್ಲಿ ವಿಶ್ಲೇಷಿಸಿದರು. ಇಲ್ಲಿ 'ತಾತ್ವಿಕವಾಗಿ ಬಂಡಾಯವನ್ನು ಒಪ್ಪುತ್ತ ಬಸವಲಿಂಗಪ್ಪನವರ ಟೀಕೆಯನ್ನು ಸಹಿಸಲು ಸಿದ್ಧರಾಗಿಲ್ಲದವರು' ಯಾರೆಂಬುದು ನಿಗೂಢವಾಗಿದೆ. 'ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು ಬೂಸಾ ಎಂದು ಕರೆದಾಗ, ಹಾಗೇಕೆ ಕರೆದರೆಂಬ ಪ್ರಶ್ನೆಯನ್ನು ನಮಗೆ ನಾವು ಕೇಳಿಕೊಳ್ಳಬೇಕು. ನಮ್ಮ ಮತಧರ್ಮಗಳಿಂದ ಮೊದಲಿಂದಲೂ ವಂಚಿತರಾಗಿ ಹೊರಗುಳಿದ ಪಂಚಮರಿಗೆ ಮತೀಯ ಸಾಹಿತ್ಯದಿಂದ ತುಂಬಿದ ಕನ್ನಡ ಸಾಹಿತ್ಯ ಅರ್ಥಹೀನವಾಗಿ ಕಂಡರೆ, ಅದರಲ್ಲಿ ಆಶ್ಚರ್ಯವೇನಿದೆ? ಅಲ್ಲದೆ ಪಂಚಮರು ಕನ್ನಡ ಸಾಹಿತ್ಯದ ಇಂತಹ ಮತೀಯ ಪರಂಪರೆಯನ್ನು ಉದ್ವಿಗ್ನತೆಯಲ್ಲಿ ತ್ಯಜಿಸಿದಾಗ ಮಹಾರಾಷ್ಟ್ರದ ಮಹರ್ ಜನಾಂಗದ ಲೇಖಕರಂತೆ (ಪ್ಯಾಂಥರ್ಸ್) ಇವರೂ ಕನ್ನಡಕ್ಕೆ ನಿಜವಾಗಿಯೂ ಹೊಸದಾದ್ದನ್ನು ಸೇರಿಸುವ ಸಾಧ್ಯತೆಯಿಲ್ಲವೇ?' ಎಂದವರು ಪ್ರಶ್ನಿಸಿದರು.

ಮೇಲ್ಕಾಣಿಸಿದ ವಾದದಲ್ಲಿ ಕನ್ನಡ ದಲಿತ ಲೇಖಕರನ್ನು ಮರಾಠಿ ದಲಿತ ಲೇಖಕರೊಂದಿಗೂ, 'ಪ್ಯಾಂಥರ್' ಶಬ್ದದ ಮೂಲಕ ಅಮೆರಿಕ–ಆಫ್ರಿಕಾಗಳ ಕಪ್ಪುಸಾಹಿತ್ಯ ಚಳವಳಿಯ ಬ್ಲಾಕ್ ಪ್ಯಾಂಥರಿನ ಜತೆಗೂ ಜೋಡಿಸಲಾಗುತ್ತಿದೆ; ಇನ್ನೂ ರೂಪು ತಳೆದಿರದ ಕನ್ನಡ ದಲಿತ ಸಾಹಿತ್ಯಕ್ಕೆ ಜಾಗತಿಕ ಭ್ರಾತೃತ್ವವನ್ನು ಕಲ್ಪಿಸಲಾಗುತ್ತಿದೆ. ಇದೇ ಹೊತ್ತಿಗೆ 'ಕರ್ನಾಟಕದಲ್ಲಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ನಿಲ್ಲಿಸಲು ಸೂಕ್ತಕ್ರಮ ಕೈಗೊಳ್ಳಬೇಕೆಂದು' ಮಹಾರಾಷ್ಟ್ರದ ದಲಿತ ಪ್ಯಾಂಥರ್, ಪ್ರಧಾನಮಂತ್ರಿಯವರಿಗೆ ಪತ್ರ ಬರೆದಿತ್ತು. ಈ ಎಲ್ಲ ಬೆಳವಣಿಗೆಗಳು, ಮಹಾರಾಷ್ಟ್ರದ